ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 5867
ಸದಸ್ಯರ ಹೆಸರು : ಶ್ರೀ ಎಸ್. ಬಾಲರಾಜ್ (ಕೊಳ್ಳೇಗಾಲ)
ಉತ್ತರಿಸುವ ದಿನಾಂಕ : 19.07.2005
ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಕೊಳ್ಳೇಗಾಲ ಪಟ್ಟಣಕ್ಕೆ ಅಗ್ನಿಶಾಮಕ ಠಾಣೆ ಅವಶ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ
ಆ.	ಅನೇಕ ಬೆಂಕಿ ಅನಾಹುತಗಳಿಗೆ ಪಟ್ಟಣ ವ್ಯಾಪ್ತಿಯಲ್ಲಿ ತುರ್ತಾಗಿರುವುದು ಅಲ್ಲದೆ ಸುಮಾರು 40ಕಿ.ಮೀ.ದೂರದ ಚಾಮರಾಜನಗರದ ಅನಾಹುತ ತಡೆಯಲು ಸಾಧ್ಯವೆ?	ಮಳವಳ್ಳಿ ಹಾಗು ಚಾಮರಾಜನಗರ ಅಗ್ನಿಶಾಮಕ ಠಾಣೆಗಳಿಂದ ಕೊಳ್ಳೇಗಾಲ ಪಟ್ಟಣ ಹಾಗು ಅದರ ಸುತ್ತಮುತ್ತಲು ಸಂಭವಿಸುವ ಅಗ್ನಿ ಅಪಘಾತಗಳನ್ನು ನಂದಿಸಲು ಸಾಧ್ಯವಿದೆ.
ಇ.	ಅವಶ್ಯವಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು	ರಾಜ್ಯ ಸರ್ಕಾರವು ರಾಜ್ಯದ ಎಲ್ಲಾ 176 ತಾಲೂಕುಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸುವ ಯೋಜನೆಯನ್ನು ಹಮ್ಮಿಕೊಂಡಿದೆ, ಇವುಗಳಲ್ಲಿ ಈಗಾಗಲೇ ರಾಜ್ಯದ 97ತಾಲೂಕುಗಳಲ್ಲಿ 115 ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸಲಾಗಿದ್ದು, ಅವುಗಳು ಕಾರ್ಯನಿರ್ವಹಿಸುತ್ತಿವೆ. ಕೊಳ್ಳೇಗಾಲ ಅಗ್ನಿಶಾಮಕ ಠಾಣೆಗೆ ಹೆಚ್ಚಿನ ಅನುದಾನವನ್ನು ಹಾಗು ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಂಡು ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲಾಗುವುದು.

3-3 ದಿವಸಗಳಿಂದ ಜಾಸ್ತಿ ಇದೆ. ಏನೋ ಕೆಲಸವಿಲ್ಲದೆ ಕೇಳುತ್ತಿದ್ದಾರೆ.

ಶ್ರೀ ವೈಜನಾಥ್ ಪಾಟೀಲ್: ಅಲ್ಲಿ ಬಾಳೇಕುಂದ್ರಿಯವರ ಹೆಸರನ್ನು ಇಡಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು. ಇದರ ಬಗ್ಗೆ ಎಲ್ಲರನ್ನು ಕರೆಸಿ

ಚರ್ಚೆಯನ್ನು ಮಾಡಬೇಕು.

ಶ್ರೀ ಬಾಲರಾಜ್ ಎಸ್.: ಮಾನ್ಯ ಉಪಾಧ್ಯಕ್ಷರೆ, ಕೊಳ್ಳೇಗಾಲ ಕ್ಷೇತ್ರಕ್ಕೆ ಅಗ್ನಿಶಾಮಕ ಠಾಣೆ ಅವಶ್ಯಕತೆ ಇದೆ ಎಂದು ಕೇಳಿದ್ದೇನೆ. 40ಕಿ.ಮೀ.ದೂರದಿಂದ ಬೆಂಕಿ ಅನಾಹುತವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಕೇಳುತ್ತಿರುವಂತಹ ಪ್ರಶ್ನೆಗೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ಚಾಮರಾಜನಗರ ಮತ್ತು ಮಳವಳ್ಳಿಗಳಿಂದ ಅಗ್ನಿ ಅಪಘಾತಗಳನ್ನು ನಂದಿಸುವುದಕ್ಕೆ ಸಾಧ್ಯವಿದೆ ಎಂದು ಹೇಳಿದ್ದಾರೆ. ಸುಮಾರು ಒಂದು ಕಾಲು ಗಂಟೆಗಳ ಕಾಲ ಬೇಕು ಅದು ನಮ್ಮ ಕೊಳ್ಳೇಗಾಲ ಪಟ್ಟಣಕ್ಕೆ ಬಂದು ಸೇರುವುದಕ್ಕೆ. ಅದು ಎಷ್ಟು ಹೊತ್ತು ಬಿಟ್ಟುಕೊಂಡು ಬರುವ ತನಕ ಅದನ್ನು ನಂದಿಸುವುದಕ್ಕೆ ಸಾಧ್ಯವಿದೆ. ಆದರೆ ಅನಾಹುತವನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಕೊಳ್ಳೇಗಾಲ ಪಟ್ಟಣವು ಸುಮಾರು 50ಸಾವಿರ ಜನಸಂಖ್ಯೆಯನ್ನು ಹೊಂದಿರುವುದರಿಂದ ಅತ್ಯಾವಶ್ಯಕವಾಗಿ ನಮಗೆ ಒಂದು ಅಗ್ನಿಶಾಮಕ ಠಾಣೆ ಬೇಕಾಗಿದೆ, ಅದನ್ನು ಆದ್ಯತೆಯ ಮೇರೆಗೆ ಮಾಡಬೇಕು, ನಾನು ಕಳೆದ ವರ್ಷದಿಂದಲೂ ಕೂಡ ಕೇಳುತ್ತಿದ್ದೇನೆ, ದಯವಾಡಿ ಈ ಸಲವಾದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಅದನ್ನು ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 5882
ಸದಸ್ಯರ ಹೆಸರು : ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್
ಉತ್ತರಿಸುವ ದಿನಾಂಕ : 19.07.2005
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ ವಿಭಾಗದಲ್ಲಿರುವ ಒಟ್ಟು ಬಸ್ ನಿಲ್ದಾಣಗಳ ಸಂಖ್ಯೆ ಎಷ್ಟು (ವಿವರ ಒದಗಿಸುವುದು);	1. ಬಾಗಲಕೋಟೆ, 2. ಬೀಳಗಿ 3. ಇಳ್ಕಲ್ 4. ಅಮ್ಮಿನಗಡ 5. ಹುನಗುಂದ 6.ಬಾದಾಮಿ 7. ಕೇರೂರು 8. ಗುಳೇದಗುಡ್ಡ 9. ಕುಳಗೇರಿ ಕ್ರಾಸ್ 10. ಮುದೋಳ 11. ಬನಹಟ್ಟಿ 12. ಜಮಖಂಡಿ 13. ರಬಕವಿ 14. ತೆರದಾಳ 15. ಲೋಕಾಪುರ 16. ಮಹಾಲಿಂಗಪುರ.
ಆ	ಬಾಗಲಕೋಟೆ ವಿಭಾಗದಲ್ಲಿ ಹೊಸ ಬಸ್ ನಿಲ್ದಾಣಗಳನ್ನು ನಿರ್ಮಿಸಲು ಸರ್ಕಾರ ಉದ್ದೇಶಿಸಿದೆಯೇ; ಹಾಗಿದ್ದಲ್ಲಿ ಉದ್ದೇಶಿತ ಸ್ಥಳ ಯಾವುದು;	ಹೌದು ಬಾಗಲಕೋಟೆ–ನವನಗರದಲ್ಲಿ